**ಇಂದು ದಿಃ 31.01.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟಿ ಸವಾಲು ಆರೋಪಿ ಪರ ಶ್ರೀ. ಸಿ.ಕೆ.ಎಂ. ವಕೀಲರಿಂದಃ**

ನಾನು ಪಿ.ಯು.ಸಿ. ಮತ್ತು ಟಿ.ಸಿ.ಹೆಚ್ ಮಾಡಿದ್ದೇನೆ. ಮಿಳಿಂದ ಶಾಲೆಗೆ ಸೇರುವ ಪೂರ್ವದಲ್ಲಿ ನಾನು ಎರಡು ಖಾಸಗಿ ಶಾಲೆಗಳಲ್ಲಿ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ. ವಿದ್ಯುಚ್ಚಕ್ತಿ ಬಿಲ್ ಅನ್ನು ಪಾವತಿಸಿದಾಗ ಮತ್ತು ಬ್ಯಾಂಕಿನಲ್ಲಿ ಹಣ ಜಮಾ ಮಾಡಿದಾಗ ಅವುಗಳ ಬಗ್ಗೆ ರಸೀದಿ ಪಡೆಯಬೇಕು ಎಂದರೆ ಗೊತ್ತು. ನಾನು ಖಾಸಗಿ ಶಾಲೆಗಳಿಗೆ ಸೇರುವಾಗ ಅರ್ಜಿಯಲ್ಲಿ ನನ್ನ ಸಂಗತಿಗಳನ್ನು ನಮೂದಿಸಿ ಕೊಟ್ಟಿರುತ್ತೇನೆ. ಅರ್ಜಿಯ ಜೊತೆ ನನ್ನ ವಿದ್ಯಾರ್ಹತೆಗೆ ಸಂಬಂಧಿಸಿದ ದಾಖಲೆಗಳನ್ನು ಕೊಟ್ಟಿರಲಿಲ್ಲ. ನನ್ನ ವಿದ್ಯಾರ್ಹತೆಯ ಬಗ್ಗೆ ನಾನು ಮೌಖಿಕವಾಗಿ ಮಾತ್ರ ಹೇಳಿರುತ್ತೇನೆ ಯಾವುದೇ ದಾಖಲೆಯನ್ನು ಕೊಟ್ಟಿರುವುದಿಲ್ಲ. ಸದರಿ ಶಾಲೆಗಳಲ್ಲಿ ನಾನು 1998 ರಿಂದ 2002 ನೇ ಸಾಲಿನವರೆಗೆ ಕೆಲಸ ಮಾಡಿದ್ದೇನೆ.

ಮಿಳಿಂದ ಶಾಲೆಗೆ ಕೆಲಸಕ್ಕೆ ಸೇರುವಾಗ ಕೆಲಸಕ್ಕೆ ಸೇರಿಸಿಕೊಳ್ಳಿ ಎಂದು ಅರ್ಜಿ ಕೊಟ್ಟಿರುತ್ತೇನೆ. ಸದರಿ ಅರ್ಜಿಯಲ್ಲಿ ನನ್ನ ವಿದ್ಯಾರ್ಹತೆ ಬಗ್ಗೆ ಮಾತ್ರ ಬರೆದಿದ್ದೇನೆ ಹಿಂದಿನ ಅನುಭವದ ಬಗ್ಗೆ ಬರೆದಿಲ್ಲ. ಸದರಿ ಅರ್ಜಿಯನ್ನು ಮಿಳಿಂದ ಶಾಲೆಯ ಆಡಳಿತ ಮಂಡಳಿ ಸಲ್ಲಿಸ ಬೇಕು ಎಂದರೆ ಸರಿ. ಸದರಿ ಆಡಳಿತ ಮಂಡಳಿಯಲ್ಲಿ ಗೋವಿಂದಯ್ಯರವರು ಮ್ಯಾನೇಂಜಿಗ್ ಟ್ರಸ್ಟಿಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ನಂತರ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಅರ್ಜಿಯನ್ನು ಆಡಳಿತ ಮಂಡಳಿಯ ದೊಡ್ಡಣ್ಣರವರಿಗೆ ಕೊಟ್ಟಿರುತ್ತೇವೆ. ಸದರಿ ದೊಡ್ಡಣ್ಣರವರು ಆಡಳಿತ ಮಂಡಳಿಯಲ್ಲಿ ಯಾವ ಹುದ್ದೆಯಲ್ಲಿದ್ದರು ಎಂದು ಗೊತ್ತಿಲ್ಲ. ಸಾಕ್ಷಿ ಅವರೇ ಶಾಲೆ ನಡೆಸುತ್ತಿದ್ದರು ಎಂದು ನುಡಿಯುತ್ತಾರೆ.

ನನಗೆ ಕೆಲಸಕ್ಕೆ ಸೇರಿಸಿಕೊಳ್ಳುವಾಗ ಯಾವುದೇ ಲಿಖಿತ ಪರೀಕ್ಷೆಯಾಗಲೀ ಮೌಖಿಕ ಪರೀಕ್ಷೆ ಆಗಲಿ ಮಾಡಲಿಲ್ಲ. ನನ್ನ ವಿದ್ಯಾರ್ಹತೆ ಬಗ್ಗೆ ನನ್ನ ಅರ್ಜಿ ಜೊತೆ ದಾಖಲೆಗಳನ್ನು ದೊಡ್ಡಣ್ಣರವರಿಗೆ ಕೊಟ್ಟಿದ್ದೆ. ದೊಡ್ಡಣ್ಣರವರಿಗೆ ಅರ್ಜಿ ಕೊಡಲು ನನ್ನ ಸ್ನೇಹಿತರಾದ ಗುರುದತ್ ತಿಳಿಸಿದ್ದರು. ಗುರುದತ್ ರಾಜೇಶ್ವರಿ ಹೈ

ಸ್ಕೂಲ್ ನಲ್ಲಿ ಶಿಕ್ಷಕರಾಗಿದ್ದರು. ಆರೋಪಿ ಸಂಸ್ಥೆ ನಾನೇ ನಡೆಸುತ್ತಿದ್ದೇನೆ ಎಂದು ನನಗೆ ಹೇಳಿರುತ್ತಾರೆ. ಕೆಲಸಕ್ಕೆ ಸೇರಿದ ಅರ್ಜಿಯನ್ನು ದಿಃ *07.01.2003* ರಂದು ಕೊಟ್ಟಿರುತ್ತೇನೆ. ಅರ್ಜಿಯನ್ನು ವ್ಯವಸ್ಥಾಪಕ ಧರ್ಮದರ್ಶಿ ರವರಿಗೆ ಎಂದು ಅರ್ಜಿಯಲ್ಲಿ ಬರೆದಿರುತ್ತೇನೆ. ಶಾಲೆಗೆ ಸೇರುವಾಗ ಅದು ಯಾವ ರೀತಿಯ ಸಂಸ್ಥೆ ಎಂದು ಗೊತ್ತಿರಲಿಲ್ಲ. ನನಗೆ ಕೆಲಸಕ್ಕೆ ಸೇರಿಸಿಕೊಳ್ಳಲು ನೇಮಕಾತಿ ಪತ್ರ ಕೊಟ್ಟಿದ್ದರು.

ನೇಮಕಾತಿ ಪತ್ರಕ್ಕೆ ಗೋವಿಂದಯ್ಯರವರು ಸಹಿ ಮಾಡಿದ್ದರು. ಅದರಲ್ಲಿ ಅವರು ಮ್ಯಾನೇಜಿಂಗ್ ಟ್ರಸ್ಟೀ ಎಂದು ಸೀಲು ಮತ್ತು ಸಹಿ ಇತ್ತು. ನೇಮಕಾತಿ ಪತ್ರವನ್ನು ಕೊಟ್ಟ ದಿನಾಂಕ ನೆನಪಿಲ್ಲ. ಅದನ್ನು ಜನವರಿ *2003* ರಲ್ಲಿ ನೀಡಿರುತ್ತಾರೆ. ನೇಮಕಾತಿ ಪತ್ರ ಕೊಟ್ಟ ನಂತರ ನಾನು ಕೃತಜ್ಞತೆ ಸಲ್ಲಿಸಲು ಗೋವಿಂದಯ್ಯರವರ ಬಳಿ ಹೋಗಿರಲಿಲ್ಲ. ನಾನು ಗೋವಿಂದಯ್ಯರವರನ್ನು ಪ್ರಥಮ ಬಾರಿಗೆ *2006* ರಲ್ಲಿ ಭೇಟಿಯಾಗಿದ್ದೇನೆ, ಅದರೆ ದಿನಾಂಕ ಮತ್ತು ತಿಂಗಳು ನೆನಪಿಲ್ಲ. ಕೆಲಸಕ್ಕೆ ಸೇರಿದ *4* ತಿಂಗಳ ನಂತರ ಸಂಸ್ಥೆ ಟ್ರಸ್ಟ್ ಆಗಿದೆ ಎಂದು ಗೊತ್ತಾಗಿರುತ್ತದೆ. ಅದರಲ್ಲಿ *5* ಜನ ಟ್ರಸ್ಟಿಗಳು ಇದ್ದಾರೆ ಮತ್ತು ಅವರಲ್ಲಿ ಗೋವಿಂದಯ್ಯರವರು ಮ್ಯಾನೇಜಿಂಗ್ ಟ್ರಸ್ಟಿ ಎಂದು ಗೊತ್ತಾಯಿತು.

ಶಾಲೆಯ ಅಭಿವೃದ್ದಿಗೆ ಸಂಬಂಧ ಪಟ್ಟ ಕೆಲಸಗಳಲ್ಲಿ ಶಿಕ್ಷಕರನ್ನು ಸೇರಿಸಿಕೊಳ್ಳುವ ಪದ್ಧತಿ ಇರಲಿಲ್ಲ. ಟ್ರಸ್ಟ್ ನವರು ತಿಂಗಳಿನಲ್ಲಿ ಎಷ್ಟು ಬಾರಿ ಮೀಟಿಂಗ್ ಮಾಡುತ್ತಿದ್ದರು ಗೊತ್ತಿಲ್ಲ. ಮ್ಯಾನೇಜಿಂಗ್ ಟ್ರಸ್ಟಿ ರವರ ನಿರ್ದೇಶನದ ಮೇಲೆ ಶಾಲೆಯ ಎಲ್ಲಾ ಕೆಲಸ-ಕಾರ್ಯಗಳು ನೆಡೆಯುತ್ತಿದ್ದವು ಎಂದರೆ ಸರಿಯಲ್ಲ. ಶಿಕ್ಷಕರಿಗೆ ಸಂಬಳವನ್ನು ನಗದು ರೂಪದಲ್ಲಿ ಕೊಡುತ್ತಿದ್ದರು. ನಾನು ಮಿಳಿಂದ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕನಾಗಿ ಸೇರಿದ್ದೆನು. ಆಗ ಲೊಕೇಶ್ ಎಂಬುವರು ಮುಖ್ಯೋಪಾಧ್ಯಯರು ಆಗಿದ್ದರು. ಶಾಲೆಯ ಲೆಕ್ಕ ಪತ್ರಗಳನ್ನು ನೋಡಿಕೊಳ್ಳ ಗುಮಾಸ್ತರಿರಲಿಲ್ಲ ಸಾಕ್ಷಿಯು ಶಿಕ್ಷಕರಲ್ಲಿ ಒಬ್ಬರು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಶಿಕ್ಷಕರಾದ ಗೀತಾ ಮತ್ತು ಸುಲೋಚನ ರವರು ಲೆಕ್ಕ ಪತ್ರಗಳನ್ನು ನೋಡಿಕೊಳ್ಳುತ್ತಿದ್ದರು. ಮ್ಯಾನೇಜಿಂಗ್ ಟ್ರಸ್ಟಿ ರವರ ಕಡೆಯಿಂದ ಸದರಿ ಶಿಕ್ಷಕರಿಗೆ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುವ ಬಗ್ಗೆ

ಯಾವುದೇ ಅದೇಶ ಆಗಿರಲಿಲ್ಲ. ಅವರಿಗೆ ಮುಖ್ಯೋಪಾಧ್ಯಯರ ನಿರ್ದೇಶನ ಸಹ ಇರಲಿಲ್ಲ. ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಳ್ಳಲು ಶಾಲೆಯ ಅಭಿವೃದ್ಧಿ ಶುಲ್ಕ ರೂ.500/- ಮತ್ತು 1 ರಿಂದ 4 ನೇ ತರಗತಿಯ ವಿದ್ಯಾರ್ಥಿಗಳಿಗೆ ಮಾಸಿಕ ರೂ.25 ಮತ್ತು 5 ರಿಂದ 7 ನೇ ತರಗತಿಯ ವಿದ್ಯಾರ್ಥಿಗಳಿಗೆ ಮಾಸಿಕ ರೂ.30 ಪಡೆದುಕೊಳ್ಳುತ್ತಿದ್ದೆವು. ಶಿಕ್ಷಕರು ಹಣವನ್ನು ಸಂಗ್ರಹಿಸಿ ಗೀತಾ ಮತ್ತು ಸುಲೋಚನಾ ರವರಿಗೆ ಕೊಡುತ್ತಿದ್ದರು. ಮೇಲೆ ಹೇಳಿದ ಶುಲ್ಕಗಳನ್ನು ವಸೂಲಿ ಮಾಡಬೇಕು ಎಂದು ಮ್ಯಾನೇಜಿಂಗ್ ಟ್ರಸ್ಟಿ ಕಡೆಯಿಂದ ಅದೇಶವಾಗಲೀ ನಿರ್ದೇಶನವಾಗಲಿ ಇರಲಿಲ್ಲ. ಹಣ ವಸೂಲಿ ಮಾಡಿದ ಬಗ್ಗೆ ನಾವು ಪೋಷಕರಿಗೆ ರಸೀದಿಯನ್ನು ಕೊಡುತ್ತಿರಲಿಲ್ಲ. ಹಣ ವಸೂಲಿ ಮಾಡುತ್ತಿದ್ದ ಬಗ್ಗೆ ರಸೀದಿಯನ್ನು ಕೊಡುತ್ತಿಲ್ಲ ಎಂದು ನಾನು ಟ್ರಸ್ಟಿಯವರಿಗೆ ದೂರು ಕೊಟ್ಟಿಲ್ಲ.

ಮಿಳಿಂದ ವಿದ್ಯಾಸಂಸ್ಥೆಗೆ ದೊಡ್ಡಣ, ಸುಮಿತ್ರ ಭಾಯಿ, ಭೂತಯ್ಯ , ಗೋವಿಂದಯ್ಯ, ಶೀಮತಿ ಗೋಪಮ್ಮ ರವರು ಧರ್ಮದರ್ಶಿಗಳಾಗಿದ್ದರು. 2006 ನೇ ಸಾಲಿನ ವರೆಗೆ ಮೋಲೆ ಹೇಳಿದ ಟ್ರಸ್ಟಿಗಳಲ್ಲಿ ದೊಡ್ಡಣ್ಣರವರು ಒಬ್ಬರನ್ನು ಬಿಟ್ಟರೇ ಬೇರೆ ಯಾವ ಧರ್ಮದರ್ಶಿಗಳು ಶಾಲೆಗೆ ಭೇಟಿ ಕೊಟ್ಟಿರಲಿಲ್ಲ. ಮೇಲೆ ಹೇಳಿದ ಶುಲ್ಕಗಳನ್ನು ವಸೂಲಿ ಮಾಡಿದ ಬಗ್ಗೆ ಗೀತಾ ಮತ್ತು ಸುಲೋಚನರವರು ಲೆಕ್ಕ ಪತ್ರಗಳನ್ನು ಇಟ್ಟಿದ್ದಾರೆ. ಸದರಿ ಲೆಕ್ಕ ಪತ್ರಗಳಲ್ಲಿ ದೊಡ್ಡಣ್ಣರವರು ಮಿಳಿಂದ ಶಾಲೆಯ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ನಮೂದು ಇದೆಯೋ ಇಲ್ಲವೋ ಗೊತ್ತಿಲ್ಲ. ದೊಡ್ಡಣ್ಣರವರು ಹಣದುರುಪಯೋಗ ಪಡಿಸಿಕೊಂಡ ಬಗ್ಗೆ ನಾನು ಗೀತಾ ಮತ್ತು ಸುಲೋಚನರವರಿಗೆ ಕೇಳಿ ಮಾಹಿತಿ ಸಂಗ್ರಹ ಮಾಡಿಲ್ಲ.

2006 ರಿಂದ 2008-09 ರ ವರೆಗೆ ನಾನು ಹಣ ದುರುಪಯೋಗದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದೇನೆ. 2006 ರಿಂದ 2009 ರ ವರೆಗೆ ದೊಡ್ಡಣ್ಣರವರು ಎಷ್ಟು ಹಣ ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳಲಾಗುವುದಿಲ್ಲ. ಅದರ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ. ನಮ್ಮ ಶಾಲೆ

ಅನುದಾನಿತ ಶಾಲೆ ಎಂದು ದಿಃ 16.06.2009 ರಂದು ಆಗಿರುತ್ತದೆ. ಶಾಲೆ ಅನುದಾನಿತ ಶಾಲಿ ಆಗಬೇಕು ಎಂದರೆ ಸರ್ಕಾರಕ್ಕೆ ಶಾಲೆಯ ಎಲ್ಲಾ *Infrastructure* ಮತ್ತು ಲೆಕ್ಕ ಪತ್ರಗಳನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಸರ್ಕಾರಕ್ಕೆ ನಾವು ಒದಗಿಸಿದ ಮಾಹಿತಿಯಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದ ನಂತರ ನಮ್ಮ ಶಾಲೆ ಅನುದಾನಿತ ಶಾಲೆ ಎಂದು ಘೋಷಿಸಲಾಗಿರುತ್ತದೆ ಎಂದರೆ ಸರಿ. ನಮ್ಮ ಶಾಲೆ ಅನುದಾನಿತ ಶಾಲೆ ಎಂದು ಘೋಷಣೆಯಾಗುವ ವರೆಗೆ ಶಿಕ್ಷಕರಿಗೆ ನಿಗದಿ ಪಡಿಸಿದ ಸಂಬಳವನ್ನು ಕೊಡುತ್ತಿದ್ದರು. ನಾನು 2003 ರಲ್ಲಿ ಕೆಲಸಕ್ಕೆ ಸೇರುವಾಗ ಯಾರಿಗೂ ಹಣ ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು 2006 ರಲ್ಲಿ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

ನಾನು ಹಣವನ್ನು ನೇಮಕಾತಿ ಪತ್ರ ತಂದುಕೊಟ್ಟವರಿಗೆ ಕೊಟ್ಟಿರುತ್ತೇನೆ. ಹಣವನ್ನು ಮನೆಯಲ್ಲಿದ್ದ ಒಡವೆಗಳನ್ನು ಬ್ಯಾಂಕಿನಲ್ಲಿಟ್ಟು ಮತ್ತು ಸ್ವಲ್ಪ ಕೈ ಸಾಲ ಮಾಡಿ ಕೊಟ್ಟಿರುತ್ತೇನೆ. ಬ್ಯಾಂಕಿನಲ್ಲಿ ಒಡವೆ ಇಟ್ಟು ಹಣವನ್ನು ಮೇ-2006 ರಲ್ಲಿ ಪಡೆದಿರುತ್ತೇನೆ. ಚಿನ್ನ ಅಡವಿಡುವಾಗ ಬ್ಯಾಂಕಿನಿಂದ ಪಡೆದಿರುತ್ತೇನೆ. ಕೈ ಸಾಲವನ್ನು ಪಡೆಯುವಾಗ ದಾಖಲೆ ಮಾಡಿಕೊಂಡಿಲ್ಲ. ಕೈ ಸಾಲವನ್ನು ನನ್ನ ಹೆಂಡತಿಯ ಸಂಬಂಧಿಕರಿಂದ ಪಡೆದಿರುತ್ತೇನೆ. ಮೊದಲು 25 ಸಾವಿರ ರೂ ಗಳನ್ನು ದೊಡ್ಡಣ್ಣರವರಿಗೆ ಕೊಟ್ಟಿರುತ್ತೇನೆ. ಹಣವನ್ನು ದಿಃ 25.05.2006 ರಂದು ಕೊಟ್ಟಿರುತ್ತೇನೆ. ಅವರು ಶಾಲೆಯನ್ನು ಅನುದಾನಕ್ಕೆ ಒಳಪಡಿಸುತ್ತೇವೆ ಮತ್ತು ಶಾಲೆಗೆ ವಾಹನ ಖರೀದಿಸಲು ಹಣ ಬೇಕು ಎಂದು ಹಣ ಪಡೆದುಕೊಂಡಿರುತ್ತಾರೆ. ಅವರಿಗೆ ಇಷ್ಟು ಹಣ ಕೊಡುತ್ತಿದ್ದೇವೆ ಎಂದು ಉಳಿದ ಟ್ರಸ್ಟಿಗಳಿಗೆ ತಿಳಿಸುವ ಬಗ್ಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಇತ್ತು ಅವರಿಗೆ ತಿಳಿಸಿದರೆ ದೊಡ್ಡಣ್ಣ ರವರು ನಮ್ಮನ್ನು ಕೆಲಸದಿಂದ ತೆಗೆದು ಹಾಕಬಹುದು ಎಂಬ ಹೆದರಿಕೆ ಇತ್ತು. ನೇಮಕಾತಿ ಅದೇಶ ಯಾರು ಕೊಡುತ್ತಾರೋ ಅವರಿಗೆ ಮಾತ್ರ ಕೆಲಸದಿಂದ ತೆಗೆಯುವ ಅಧಿಕಾರ ಇರುತ್ತದೆ ಎಂದರೆ ಸರಿ.

**ಪಿಡಬ್ಲೂಃ 04**

7 ಜನ ಶಿಕ್ಷಕರು ದೊಡ್ಡಣ್ಣರವರಿಗೆ ಹಣ ಕೊಟ್ಟಿರುತ್ತೇವೆ. ಹಣ ಕೊಟ್ಟ ಬಗ್ಗೆ ದೊಡ್ಡಣ್ಣರವರಿಗೆ ರಸೀದಿ ಕೊಡಿ ಎಂದು ಕೇಳಿಲ್ಲ. ರಸೀದಿ ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಆದರೆ ರಸೀದಿ ಕೇಳುವಷ್ಟು ದೈರ್ಯವಿರಲಿಲ್ಲ.

**ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸರಿ. ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**